# ಕುಲಾಂತರಿ ಬೆಳೆ?

## ಬೇಡ..! ಮತ್ತೊಮ್ಮೆ ಖಂಡಿತ ಬೇಡ!!

## ದೆಹಲಿ ವಿಶ್ವವಿದ್ಯಾಲಯದ ಕುಲಾಂತರಿ ಸಾಸಿವೆ ಬೇಡ ಎನ್ನಲು 25 ಕಾರಣಗಳು

ನಿಮಗೆ ನೆನಪಿದೆಯೇ, ಅನಗತ್ಯ ಹಾಗೂ ಅಸುರಕ್ಷಿತ ಅನಿಸಿದ್ದ ಕುಲಾಂತರಿ ಬದನೆಯನ್ನು ನಾಗರಿಕ ಸಂಘಟನೆಗಳ ಪ್ರತಿನಿಧಿಗಳು, ಜನರು ಹಾಗೂ ವಿಜ್ಞಾನಿಗಳು ಒಟ್ಟಾಗಿ ವಿರೋಧಿಸಿದ್ದು? ಅದು ನಮ್ಮ ಊಟದ ತಟ್ಟೆಗೆ ಬರಬಾರದು ಎಂದು 2010ರಲ್ಲಿ ದೊಡ್ಡ ಜನಾಂದೋಲನವನ್ನೇ ನಡೆಸಿದ್ದು ನೆನಪಿದೆಯೇ? ಕುಲಾಂತರಿ ಆಹಾರ ಬೆಳೆಯ ವಾಣಿಜ್ಯ ಕೃಷಿಗೆ ಅನುಮತಿ ನೀಡದ ಅಂದಿನ ಕೇಂದ್ರ ಸರ್ಕಾರ, ಅನಿರ್ದಿಷ್ಟಾವಧಿ ನಿಷೇಧವನ್ನು ಸಹ ವಿಧಿಸಿತ್ತು. ಆ ಬಳಿಕ ಬಿಟಿ ಹತ್ತಿ ಉಂಟು ಮಾಡಿದ ಅಧ್ವಾನಗಳೂ ಅದು ರೈತರ ಸ್ವಾವಲಂಬನೆಯನ್ನು ಕಿತ್ತಿಕೊಂಡ ಬಗೆ ಬಹಿರಂಗವಾಯಿತು. ಕೀಟನಿರೋಧಕ ಸಾಮರ್ಥ್ಯ ಹೊಂದಿದೆ ಎಂದು ತುತ್ತೂರಿಯೊಂದಿಗೆ ರೈತರ ಹೊಲಕ್ಕೆ ಕಾಲಿಟ್ಟ ಬಿಟಿ ಹತ್ತಿಯು ಕೆಲವೇ ದಿನಗಳಲ್ಲಿ ತನ್ನ ಅಸಲಿ ಮುಖವನ್ನು ಅನಾವರಣಗೊಳಿಸಿತು. ಬಿಟಿ ಹತ್ತಿಗೆ ಸಿಂಪಡಿಸುತ್ತಿದ್ದ ಪೀಡೆನಾಶಕಗಳ ಪ್ರಮಾಣ ಅಧಿಕವಾಗುತ್ತಿದ್ದುದು, ಆ ಕೀಟಗಳು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಳ್ಳುತ್ತಿರುವುದು ಬಯಲಾಯಿತು. ಅದರಲ್ಲೂ ಒಂದೇ ಒಂದು ಬಹುರಾಷ್ಟ್ರೀಯ ಕಂಪನಿ ಮೊನ್ಸಾಂಟೊ ಇಡೀ ಹತ್ತಿ ಬೀಜ ಮಾರುಕಟ್ಟೆ ಮೇಲೆ ಏಕಸ್ವಾಮ್ಯ ಸಾಧಿಸಿದ್ದನ್ನೂ ಮರೆಯುವಂತಿಲ್ಲ. ಈ ಅವಧಿಯಲ್ಲಿ ರೈತರ ಆತ್ಮಹತ್ಯೆಗಳು ಸಾವಿರ ಸಾವಿರ ಸಂಖ್ಯೆಯಲ್ಲಿ ನಡೆದು, ಅವರೆಲ್ಲ ಬಿಟಿ ಹತ್ತಿ ಬೆಳೆಗಾರರು ಎಂಬುದು ಸಹ ಈ ಕುಲಾಂತರಿಯ ಇನ್ನೊಂದು ಕರಾಳ ಮುಖವನ್ನು ತೋರಿಸಿತು.

ಈಗ, ಅಂದರೆ 2016ರಲ್ಲಿ ಇನ್ನೊಂದು ಆಹಾರ ಬೆಳೆಯನ್ನು ಕುಲಾಂತರಿಗೊಳಿಸಿ ವಾಣಿಜ್ಯ ಕೃಷಿಯತ್ತ ತರಲು ಹುನ್ನಾರ ನಡೆದಿದೆ. ಈ ಸಲ ಕುಲಾಂತರಿ ಪ್ರಯೋಗಕ್ಕೆ ಸಿಲುಕಿರುವುದು ಸಾಸಿವೆ. ಇದರ ಬಿಡುಗಡೆಗೆ ಬೇಕಾಗಿರುವ ಪರೀಕ್ಷಾ ವರದಿಗಳು ಹಾಗೂ ಸುರಕ್ಷತಾ ಕ್ರಮಗಳ ಬಗ್ಗೆ ಅರ್ಜಿ ಸಿದ್ಧಪಡಿಸಲಾಗಿದೆ. ಪರಿಸರ ಸಂರಕ್ಷಣಾ ಕಾಯ್ದೆ 1989ರ ಅನುಸಾರ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಸಚಿವಾಲಯದ ಅಡಿ ಕಾರ್ಯನಿರ್ವಹಿಸುವ ಮತ್ತು ಕುಲಾಂತರಿ ತಂತ್ರಜ್ಞಾನಕ್ಕೆ ಅನುಮೋದನೆ ಕೊಡುವ 'ಕುಲಾಂತರಿ ತಂತ್ರಜ್ಞಾನ ಅನುಮೋದನಾ ಸಮಿತಿ'ಗೆ (ಜಿಇಎಸಿ) ಈ ಅರ್ಜಿ ಸಲ್ಲಿಸಲಾಗಿದೆ. ಅಂದ ಹಾಗೆ ಈ ಅರ್ಜಿಯನ್ನು ಸಲ್ಲಿಸಿರುವುದು ದೆಹಲಿ ವಿಶ್ವವಿದ್ಯಾಲಯದ ಸೆಂಟರ್ ಫಾರ್ ಜೆನೆಟಿಕ್ ಮ್ಯಾನುಪುಲೇಶನ್ ಆಫ್ ಕ್ರಾಪ್ ಪ್ಲಾಂಟ್ಸ್ (ಸಿಜಿಎಂಸಿಪಿ). ಡಿಎಂಎಚ್–11 ಅಥವಾ ಧಾರಾ ಮಸ್ಟರ್ಡ್ ಹೈಬ್ರಿಡ್–11 ಹಾಗೂ ಅದರ ಇನ್ನೆರಡು ತಳಿ ಸೇರಿದಂತೆ ಒಟ್ಟಾರೆ ಮೂರು ಕುಲಾಂತರಿ ತಳಿಗಳಿಗೆ ಒಪ್ಪಿಗೆ ಕೊಡುವಂತೆ ಜಿಇಎಸಿಗೆ ಮನವಿ ಮಾಡಿದೆ.

ಭಾರತದ ನೂರು ಕೋಟಿಗೂ ಹೆಚ್ಚು ಜನರ ತೆರಿಗೆ ಹಣದಲ್ಲಿನ ಒಂದು ಪಾಲನ್ನು ಈ ಸಂಶೋಧನೆಗೆಂದು ಖರ್ಚು ಮಾಡಲಾಗಿದೆ. ಭಾರತದ ಪ್ರಜೆಗಳನ್ನು ಪ್ರಯೋಗಾಲಯದ ಇಲಿಗಳಂತೆ ಪರಿಗಣಿಸಿ ಈ ಕುಲಾಂತರಿ ಬೆಳೆ ಬಳಕೆಗೆ ಅನುಮತಿ ನೀಡಲು ಮುಂದಾಗಿರುವುದು ಖಂಡನೀಯ. ದೆಹಲಿ ವಿಶ್ವವಿದ್ಯಾಲಯವು ಅಭಿವೃದ್ಧಿಪಡಿಸಿದ ಕುಲಾಂತರಿ ಸಾಸಿವೆ ನಮಗೆ ಯಾಕೆ ಬೇಡವೇ ಬೇಡ ಎಂಬುದಕ್ಕೆ ಇಲ್ಲಿವೆ 25 ಕಾರಣಗಳು:

1. **ಕುಲಾಂತರಿ ತಂತ್ರಜ್ಞಾನ ಅಸುರಕ್ಷಿತ:** ಕುಲಾಂತರಿ ತಂತ್ರಜ್ಞಾನವು ಅನೈಸರ್ಗಿಕವಾದುದು. ಇದನ್ನು ಒಂದೊಮ್ಮೆ ಬಳಸಿದರೆ ಉಂಟಾಗುವ ಅನಾಹುತವನ್ನು ತಡೆಯಲಿಕ್ಕಾಗಲೀ, ನಿವಾರಣೆ ಮಾಡಲಿಕ್ಕಾಗಲೀ ಸಾಧ್ಯವಿಲ್ಲ. ಇಂಥ ತಂತ್ರಜ್ಞಾನವನ್ನು ನಮ್ಮ ಆಹಾರದ ವ್ಯವಸ್ಥೆಯಲ್ಲಿ ಅಳವಡಿಸುವುದರ ಪರಿಣಾಮ ಏನಾಗಬಹುದು ಎಂಬುದನ್ನು ಯೋಚಿಸಿದರೆ ದಿಗಿಲಾಗುತ್ತದೆ. ಇದರಿಂದ ಪರಿಸರದ ಮೇಲೆ ಆಗುವ ಅಡ್ಡ ಪರಿಣಾಮ ಹೇಗಿರಬಹುದು? ಇದೆಲ್ಲಕ್ಕೂ ಮೀರಿ ಕೃಷಿಯಲ್ಲಿ ಇದರಿಂದ ಎದುರಾಗುವ ಅಪಾಯಗಳು, ಸೃಷ್ಟಿಯಾಗುವ ಬಿಕ್ಕಟ್ಟು, ರೈತ ಹಾಗೂ ಗ್ರಾಹಕರಿಗೆ ಆಯ್ಕೆ ಸಿಗದೇ ಇರುವುದು, ಕುಲಾಂತರಿ ಉತ್ಪನ್ನಕ್ಕೆ ಮಾರುಕಟ್ಟೆ ಸಿಗದೇ ಹೋಗುವುದು ಇತ್ಯಾದಿ. ಕುಲಾಂತರಿ ಬೆಳೆಗಳಿಂದ ಪರಿಸರದ ಮೇಲೆ ಆಗುವ ಪರಿಣಾಮಗಳ ಬಗ್ಗೆ ಇಂಡಿಯಾಜಿಎಂಇನ್‌ಫೋ.ಒಆರ್‌ಜಿ ವೆಬ್‌ಸೈಟ್ ನೋಡಬಹುದು.

2. **ಕುಲಾಂತರಿ ಬೆಳೆಗಳು ರೈತರು, ಕೃಷಿ ಕಾರ್ಮಿಕರು ಹಾಗೂ ಗ್ರಾಹಕರ ಮೇಲೆ ದುಷ್ಪರಿಣಾಮ ಬೀರಬಹುದು:** ಕುಲಾಂತರಿ ಸಾಸಿವೆಯಂಥ ಕಳೆನಾಶಕ ಸಹಿಷ್ಣು (ಹರ್ಬಿಸೈಡ್ ಟಾಲರೆಂಟ್) ಕುಲಾಂತರಿ ಬೆಳೆಗಳು ಹಲವಾರು ದುಷ್ಪರಿಣಾಮ ಉಂಟು ಮಾಡುತ್ತವೆ. ರಾಸಾಯನಿಕ ಕಳೆನಾಶಕದ ಬಳಕೆ ಸೇರಿದಂತೆ ಹಲವು ಬಗೆಯಲ್ಲಿ ಆರೋಗ್ಯಸಂಬಂಧಿ ಸಮಸ್ಯೆ ಎದುರಾಗಬಹುದು. ಅಧಿಕ ಬಳಕೆಯ ಕಳೆನಾಶಕ ಗ್ಲಿಫೊಸೆಟ್ ಬಳಕೆ ಮಾಡುತ್ತಿರುವ ಅಮೆರಿಕ, ಕೆನಡಾ, ಬ್ರೆಝಿಲ್ ಇತರ ದೇಶಗಳಲ್ಲಿ, ಈ ಕಳೆನಾಶಕದ ಪ್ರಮಾಣ ಅತ್ಯಧಿಕವಾಗಿದೆ. ಮೊದಲಿಗೆ ಇದು ಸುರಕ್ಷಿತ ಎಂದು ಕುಲಾಂತರಿ ಪ್ರತಿಪಾದಕರು ಹೇಳಿದ್ದರಾದರೂ 2015ರಲ್ಲಿ ವಿಶ್ವ ಆರೋಗ್ಯ ಸಂಸ್ಥೆಯು ಗ್ಲಿಫೊಸೆಟ್ ಅನ್ನು 'ಕ್ಯಾನ್ಸರ್ ಸಂಭಾವಕ' ಎಂದು ವರ್ಗೀಕರಿಸಿದೆ. ಕಳೆನಾಶಕಗಳಿಂದ ನಾಶವಾಗದ ಸೂಪರ್ ಕಳೆಗಳ (ಸೂಪರ್ ವೀಡ್ಸ್) ಬಗ್ಗೆ ಸಾಕಷ್ಟು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಕಳೆನಾಶಕದ ಬಳಕೆಯಿಂದ ಮಣ್ಣಿನ ಆರೋಗ್ಯದ ಮೇಲೆ ಆಗುವ ಪರಿಣಾಮವನ್ನೂ ದಾಖಲಿಸಲಾಗಿದೆ.

ಕೃಷಿ ಪ್ರಧಾನ ದೇಶವಾದ ಭಾರತವನ್ನು ಪರಿಗಣಿಸಿದರೆ, ಇಲ್ಲಿನ ಎಷ್ಟೋ ಕೃಷಿ ಕಾರ್ಮಿಕರು ಮಹಿಳೆಯರಾಗಿದ್ದು, ಅವರು ಕಳೆ ತೆಗೆಯುವ ಕೆಲಸದಿಂದಲೇ ದಿನನಿತ್ಯದ ಆದಾಯ ಗಳಿಸಿಕೊಳ್ಳುತ್ತಿದ್ದಾರೆ. ಕಳೆನಾಶಕಗಳ ಬಳಕೆಯಿಂದ ಅವರ ಕೆಲಸವನ್ನು ಕಸಿದುಕೊಳ್ಳುವುದರ ಜತೆಗೆ ಹಲವಾರು ಕೃಷಿ ಬಿಕ್ಕಟ್ಟುಗಳನ್ನು ಎದುರಿಸಬೇಕಾಗುತ್ತದೆ. ಹಾಗೆ ನೋಡಿದರೆ, ಕಳೆ ಎಂದು ಪರಿಗಣಿಸುವ ಸಸ್ಯಗಳು ಎಷ್ಟೋ ಸಲ ವ್ಯರ್ಥ ಆಗಿರುವುದೇ ಇಲ್ಲ. ಅವು ಆಹಾರ ಹಾಗೂ ಮೇವಿಗೆ ಬಳಕೆಯಾಗುತ್ತವೆ. ಕುಲಾಂತರಿ ಬೆಳೆ ಬೆಳೆದ ಮೇಲೆ ಸಿಂಪಡಿಸುವ ಕಳೆನಾಶಕದಿಂದ ಇತರ ಬೆಳೆ ಬೆಳೆಯಲು ಸಾಧ್ಯವಿಲ್ಲದಂತಾಗುತ್ತದೆ. ಇದು ಮಿಶ್ರಬೆಳೆ ಪದ್ಧತಿಯಿಂದ ರೈತ ದೂರ ಸರಿಯುವಂತೆ ಮಾಡುತ್ತದೆ. ಜಾಗತಿಕ ಹವಾಮಾನ ವೈಪರೀತ್ಯದ ಬಿಕ್ಕಟ್ಟು ಕಾಡುತ್ತಿರುವ ಈಗಿನ ಸಮಯದಲ್ಲಿ ಕೃಷಿ ಹಾಗೂ ಜೀವ ವೈವಿಧ್ಯವನ್ನು ಸಂರಕ್ಷಿಸಲು ಮುಂದಾಗಬೇಕೇ ಹೊರತೂ, ಕುಲಾಂತರಿ ತಂತ್ರಜ್ಞಾನದಿಂದ ಕೃಷಿ ಸಂಪತ್ತನ್ನು ನಾಶ ಮಾಡುವುದಲ್ಲ. ಪಕ್ಕದ ಜಮೀನಿನಲ್ಲಿ ಸಿಂಪಡಿಸಲಾದ ಕಳೆನಾಶಕದಿಂದ ತಮ್ಮ ಬೆಳೆಗೆ ಹಾನಿಯಾಗಿದೆ ಎಂದು ರೈತರು ನ್ಯಾಯಾಲಯದ ಮೊರೆ ಹೋಗಿರುವ ಪ್ರಕರಣಗಳು ಅಮೆರಿಕದಲ್ಲಿ ನಿತ್ಯವೂ ನಡೆಯುತ್ತಿವೆ. ಕಳೆನಾಶಕ ಸಹಿಷ್ಣು ಸ್ವಭಾವದ ಬೆಳೆಗಳಲ್ಲಿ ರಾಸಾಯನಿಕದ ಅವಶೇಷ ಹೆಚ್ಚಾಗಿರುವುದು ಇನ್ನೊಂದು ಸಮಸ್ಯೆ.

3. **ಕುಲಾಂತರಿ ಸಾಸಿವೆ ಹಿಂಬಾಗಿಲಿನಿಂದ ಬರಲು ಸಂಚು:** ಈಗ ಅನುಮತಿ ಕೋರಿ ಸಲ್ಲಿಸಲಾಗಿರುವ ಮೂರೂ ಕುಲಾಂತರಿ ಸಾಸಿವೆ ತಳಿಗಳು ಕಳೆನಾಶಕ ಸಹಿಷ್ಣು ಸ್ವಭಾವ ಹೊಂದಿವೆ. ಇದರ ಕೃಷಿಯಿಂದ ಎದುರಾಗಬಹುದಾದ ಅಪಾಯಗಳ ಬಗ್ಗೆ ಸಮರ್ಪಕ ಅಧ್ಯಯನ ನಡೆದಿಲ್ಲ. ಈ ತಳಿ ಅಭಿವೃದ್ಧಿಪಡಿಸಿರುವ ದೆಹಲಿ ವಿಶ್ವವಿದ್ಯಾಲಯದ ವಿಜ್ಞಾನಿಗಳು ಸಿದ್ಧಪಡಿಸಿದ ವರದಿಯಲ್ಲಿ ಇದೊಂದು ಅಧಿಕ ಇಳುವರಿ ನೀಡುವ ತಳಿ ಎಂದಷ್ಟೇ ಹೇಳಿದ್ದಾರೆ. ಅನೇಕ ಬಹುರಾಷ್ಟ್ರೀಯ ಕಂಪನಿಗಳು ಇಂಥ ವರದಿಗಳನ್ನೇ ಮುಂದಿಟ್ಟುಕೊಂಡು ಕಾಯುತ್ತ ಕುಳಿತಿವೆ; ಒಂದೊಮ್ಮೆ ಕುಲಾಂತರಿ ಸಾಸಿವೆಗೆ ಅನುಮತಿ ದೊರಕಿದರೆ ಉಳಿದ ಬೆಳೆಗಳಿಗೆ ಅವಕಾಶ ಸುಲಭವಾಗಿ ಸಿಗಲಿದೆ. ಅನೇಕ ಕುಲಾಂತರಿ ಪೇಟೆಂಟ್‌ಗಳು ಜಗತ್ತಿನ ಅತ್ಯಂತ ದೊಡ್ಡ ಕೀಟನಾಶಕ ಕಂಪನಿಗಳ ಕಪಿಮುಷ್ಠಿಯಲ್ಲಿ ಇರುವುದು ಬಹಿರಂಗ ಸತ್ಯ. ಇವು ಕಳೆನಾಶಕ ಸಹಿಷ್ಣು ತಳಿ ಉತ್ತೇಜಿಸುತ್ತಿರುವುದರ ಹಿಂದಿನ ಉದ್ದೇಶ ಸ್ಪಷ್ಟ. ಹೀಗಾಗಿ ಕುಲಾಂತರಿ ಬೀಜವನ್ನು ಖಾಸಗಿ ಕಂಪೆನಿಯಾಗಲೀ, ಸರ್ಕಾರಿ ಸಂಶೋಧನಾ ಸಂಸ್ಥೆಯಾಗಲೀ ಅಭಿವೃದ್ಧಿಪಡಿಸಿದರೆ ಅದರಿಂದ ಲಾಭವಾಗುವುದು ಕಳೆನಾಶಕ ಕಂಪನಿಗಳಿಗೇ!

4. **ಕುಲಾಂತರಿ ಸಾಸಿವೆ ಇಳುವರಿ ಹೆಚ್ಚು ಎಂಬ ತಪ್ಪು ಮಾಹಿತಿ:** ಡಿಎಂಎಚ್–11 ಅಥವಾ ಕುಲಾಂತರಿ ಸಾಸಿವೆ ಪರೀಕ್ಷೆ ಮಾಹಿತಿಯು ಅದಕ್ಕೆ ಪೂರಕವಾಗುವಂತೆ ವಿನ್ಯಾಸ ಮಾಡಲಾಗಿದೆ ಎಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರಗಳಿವೆ. ಇತರ ಹೈಬ್ರಿಡ್ ತಳಿಗಳನ್ನು ಕೈಬಿಟ್ಟು, ಕಡಿಮೆ ಇಳುವರಿಯ ತಳಿಗಳನ್ನು ಕುಲಾಂತರಿ ಇಳುವರಿಯ ಹೋಲಿಕೆಗೆ ಆಯ್ದುಕೊಳ್ಳಲಾಗಿದೆ. ಹೀಗಾಗಿ ಕುಲಾಂತರಿ ಸಾಸಿವೆಯು ಇತರ ತಳಿಗಳಿಗಿಂತ ಶೇಕಡ 8ರಷ್ಟು ಹೆಚ್ಚು ಇಳುವರಿ ಕೊಡುತ್ತದೆ ಎಂಬ ಮಾಹಿತಿ ಪಡೆಯಲಾಗಿದೆ. ಕುಲಾಂತರಿ ಸಾಸಿವೆ ಚೆನ್ನಾಗಿದೆ ಎಂದು ಹೇಳಲು ನಿರೂಪಿಸಲಾದ ಸುಳ್ಳು ಅಂಶಗಳು ಈಗ ಬಯಲಾಗಿವೆ. ಹೀಗಾಗಿ ಇಳುವರಿ ಹೆಚ್ಚಳದ ವಾದವನ್ನು ಸುಲಭವಾಗಿ ನಿರಾಕರಿಸಬಹುದು. ಈಗಾಗಲೇ ಮಾರುಕಟ್ಟೆಯಲ್ಲಿ ಬಿಟಿ ಅಲ್ಲದ ಹಲವು ಹೈಬ್ರಿಡ್ ತಳಿಗಳು ಲಭ್ಯವಿವೆ. ಅವು ಉತ್ತಮ ಇಳುವರಿಯನ್ನೂ ಕೊಡುತ್ತಿವೆ. ಗ್ರಾಹಕರಿಗೆ ಅಥವಾ ರೈತರಿಗೆ ಇದರಿಂದ ಪ್ರಯೋಜನ ಇಲ್ಲವೆಂದ ಮೇಲೆ ಯಾಕೆ ಇದಕ್ಕೆ ಅನುಮತಿ ಕೊಡಬೇಕು?

5. **ತೈಲ ಬೀಜ ಉತ್ಪಾದನೆ ಹೆಚ್ಚಳ ಹಾಗೂ ಆಮದು ಕಡಿಮೆ ಎಂಬ ವಾದ ತಪ್ಪು:** ಕುಲಾಂತರಿ ಸಾಸಿವೆಗೆ ಅನುಮತಿ ನೀಡಿದರೆ ಭಾರತದಲ್ಲಿ ಉತ್ಪಾದನೆ ಹೆಚ್ಚಾಗುತ್ತದೆ. ಇದರಿಂದ ತೈಲದ ಉತ್ಪಾದನೆಯೂ ಅಧಿಕವಾಗಿ, ಆಮದು ಕಡಿಮೆಯಾಗುತ್ತದೆ ಎಂದು ಮನವಿಯಲ್ಲಿ ತಿಳಿಸಲಾಗಿದೆ. ಆದರೆ ಸರ್ಕಾರದ ಅಧಿಕೃತ ದಾಖಲೆಗಳು ತಿಳಿಸುವ ಪ್ರಕಾರ, ಹೈಬ್ರಿಡ್ ತಳಿಗಳು ಬಂದ ಮೇಲೆ ಉತ್ಪಾದನೆಯಲ್ಲಿ ಹೆಚ್ಚಳವಾಗಿಲ್ಲ; ಆಮದು ಪ್ರಮಾಣವೂ ಕಡಿಮೆಯಾಗಿಲ್ಲ. ತಮ್ಮ ಬೆಳೆಗೆ ಅನುಮತಿ ಪಡೆಯಲು ಉತ್ಪ್ರೇಕ್ಷಿತ ಅಂಕಿ ಅಂಶ ಕೊಡಬೇಕೇ?

6. **ಕುಲಾಂತರಿ ಸಾಸಿವೆ ಮನವಿ ತಿರಸ್ಕರಿಸಬೇಕು:** 2002ರಲ್ಲಿ ಬಾಯರ್ ಕಂಪನಿಯ ಅಂಗಸಂಸ್ಥೆಯಾದ ಪ್ರೊಆಗ್ರೋ ಇಂಥದೇ ಒಂದು ಕುಲಾಂತರಿ ಸಾಸಿವೆಯನ್ನು ಅಭಿವೃದ್ಧಿಪಡಿಸಿತ್ತು. ಆದರೆ ಆ ಮನವಿಯನ್ನು ತಿರಸ್ಕರಿಸಲಾಗಿತ್ತು. ಇದರ ಪರೀಕ್ಷೆ ಹಾಗೂ ಫಲಿತಾಂಶ ಸರಿಯಾಗಿಲ್ಲ ಎಂದು ಭಾರತೀಯ ಕೃಷಿ ಸಂಶೋಧನಾ ಪರಿಷತ್ತು (ಐಸಿಎಆರ್) ಅದನ್ನು ತಿರಸ್ಕರಿಸಿತ್ತು. ಸಾಸಿವೆಯನ್ನು ಬರೀ ತೈಲಕ್ಕಾಗಿ ಉತ್ಪಾದಿಸುವುದಿಲ್ಲ; ಅದರ ಎಲೆ ಹಾಗೂ ಬೀಜಗಳನ್ನು ಅಡುಗೆಗೆ ನೇರವಾಗಿ ಬಳಸಲಾಗುತ್ತದೆ. ಪ್ರೊಅಗ್ರೋದ ಕುಲಾಂತರಿ ಸಾಸಿವೆಯು ಕಳೆನಾಶಕ ಸಹಿಷ್ಣು ಅಗಿತ್ತು ಎಂಬುದನ್ನೂ ಪರಿಗಣಿಸಿ, ಅದಕ್ಕೆ ಅನುಮತಿ ನೀಡಿರಲಿಲ್ಲ. ಒಂದು ವೇಳೆ ಈ ತಳಿಗೆ ಅನುಮತಿ ನೀಡಿದರೆ ನಕಲಿ ಕಳೆನಾಶಕಗಳ ಹಾವಳಿ ಹೆಚ್ಚಾಗಿ, ನಿಯಂತ್ರಣಕ್ಕೆ ಸಿಗದೇ ಹೋಗಬಹುದು ಎಂಬ ಆತಂಕದ ಹಿನ್ನೆಲೆಯಲ್ಲಿ ಆ ಕಂಪನಿಯ ಮನವಿ ತಳ್ಳಿ ಹಾಕಲಾಗಿತ್ತು. ಈಗ ದೆಹಲಿ ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಸಾಸಿವೆಗೆ ಸಹ ಈ ಎಲ್ಲ ಅಂಶಗಳು ಅನ್ವಯವಾಗುತ್ತವೆ!

7. **ಉಳಿದ ಕುಲಾಂತರಿ ಬೆಳೆಗೆ ಈ ಸಾಸಿವೆ ಹೆಬ್ಬಾಗಿಲು ಆದಂತೆ!:** ಸರ್ಕಾರಿ ವಲಯದ ಮೂಲಕ ಕುಲಾಂತರಿ ಸಾಸಿವೆಗೆ ಒಪ್ಪಿಗೆ ಪಡೆಯಲು ದೊಡ್ಡದೊಂದು ಯತ್ನ ನಡೆಯುತ್ತಿದೆ. ಕಂಪನಿಗಳಿಗೆ ಹೋಲಿಸಿದಾಗ, ಸರ್ಕಾರಿ ಸಂಶೋಧನಾ ಸಂಸ್ಥೆಗಳು ಅಭಿವೃದ್ಧಿಪಡಿಸುವ ತಳಿಗಳ ಜೈವಿಕ ಸುರಕ್ಷತೆಗೆ ಹೆಚ್ಚು ಪ್ರಾಮುಖ್ಯ ಸಿಕ್ಕುಬಿಡುತ್ತದೆ! ವಾಸ್ತವವಾಗಿ ಕಂಪನಿಗಳಷ್ಟೇ ಸರ್ಕಾರಿ ಸಂಶೋಧನಾ ಸಂಸ್ಥೆಗಳ ಕುಲಾಂತರಿ ತಳಿಗಳು ಅಸುರಕ್ಷತೆಯಿಂದ ಕೂಡಿರುತ್ತವೆ. ಎಲ್ಲಕ್ಕೂ ಮಿಗಿಲಾಗಿ, ಲಾಭಕೋರ ಬಹುರಾಷ್ಟ್ರೀಯ ಕಂಪನಿಗಳೂ ಸೇರಿದಂತೆ ಯಾರೊಬ್ಬರಿಗಾದರೂ ಅದರ ಪೇಟೆಂಟ್ ಕೊಡಬೇಕು. ಆಹಾರ ಮತ್ತು ಕೃಷಿಯಲ್ಲಿ ಕುಲಾಂತರಿಗೆ ಒಪ್ಪಿಗೆ ನೀಡಬಾರದು ಎಂದು ಸಾರ್ವಜನಿಕ ವಲಯದಿಂದ ಭಾರಿ ಪ್ರತಿರೋಧ ವ್ಯಕ್ತವಾದಾಗ ಬಹುರಾಷ್ಟ್ರೀಯ ಕಂಪನಿಗಳು ಬೇರೆ ಬಗೆಯ ದಾರಿ ಹುಡುಕಿಕೊಳ್ಳುತ್ತವೆ. ಸರ್ಕಾರಿ ಸಂಶೋಧನಾ ವಲಯದಿಂದ ಹೊರಬರುವ ಕುಲಾಂತರಿ ತಳಿಗೆ ಒಪ್ಪಿಗೆ ದೊರಕಿದರೆ, ಅವುಗಳ ದಾರಿ ಸುಗಮವಾದಂತೆ! ಹೀಗಾಗಿ ದೆಹಲಿ

ವಿಶ್ವವಿದ್ಯಾಲಯ ಅಭಿವೃದ್ಧಿಪಡಿಸಿರುವ ಕುಲಾಂತರಿ ಸಾಸಿವೆಯು ಉಳಿದ ಲಾಭಕೋರ ಕಂಪನಿಗಳ ಪಾಲಿಗೆ ಹೆಬ್ಬಾಗಿಲು ಇದ್ದಂತೆ!

**8. ಕೃಷಿ ವ್ಯಾಪಾರಕ್ಕೆ ಮಾತ್ರ ಕುಲಾಂತರಿ ಸಾಸಿವೆ ಲಾಭ ಕೊಡಬಲ್ಲದು:** 'ಬಾರ್' ವಂಶವಾಹಿ ಪೇಟೆಂಟ್ ಈಗ ಜರ್ಮನಿಯ ಬಹುರಾಷ್ಟ್ರೀಯ ಕಂಪನಿ ಬಾಯರ್ ಕ್ರಾಪ್ ಸೈನ್ಸ್ ವಶದಲ್ಲಿದೆ. ಕುಲಾಂತರಿ ಸಾಸಿವೆಯು ಸಹಿಷ್ಣುತೆ ಹೊಂದಿರುವ ಗ್ಲುಫೊಸೈನೇಟ್ ಅಮೋನಿಯಂ ಎಂಬ ಕಳೆನಾಶಕವನ್ನು ಭಾರತದಲ್ಲಿ ಮಾರಾಟ ಮಾಡುತ್ತಿರುವುದು ಸಹ ಇದೇ ಬಾಯರ್ ಕಂಪನಿ ಎಂಬುದು ಕುತೂಹಲಕರ. ಹೀಗಾಗಿ ಸರ್ಕಾರಿ ವಲಯದಿಂದ ಹೊರಬಡುವ ಕುಲಾಂತರಿ ಸಾಸಿವೆಯು ಬಹುರಾಷ್ಟ್ರೀಯ ಕಂಪನಿಗಳಿಗೆ ಸಾಕಷ್ಟು ಲಾಭ ತಂದುಕೊಡಬಲ್ಲದು. ಇಷ್ಟಕ್ಕೂ ಅತ್ಯಧಿಕ ಇಳುವರಿ ಕೊಡುವ ತಳಿಗಳು ಇರುವಾಗ, ಇಷ್ಟೆಲ್ಲ ಅಸುರಕ್ಷತೆಯುಳ್ಳ ಕುಲಾಂತರಿ ಸಾಸಿವೆಯನ್ನು ರೈತರಿಗೆ ಕೊಡುವುದು ಯಾಕೆ?

**9. ರಾಜ್ಯ ಸರ್ಕಾರಗಳು, ರೈತ ಸಂಘಟನೆಗಳು, ವಿಜ್ಞಾನಿಗಳಿಂದ ತೀವ್ರ ವಿರೋಧ:** ಸಾಸಿವೆಯನ್ನು ದೊಡ್ಡ ಪ್ರಮಾಣದಲ್ಲಿ ಬೆಳೆಯುವ ರಾಜಸ್ಥಾನ, ಮಧ್ಯ ಪ್ರದೇಶ ಹಾಗೂ ಹರಿಯಾಣ ರಾಜ್ಯಗಳಲ್ಲಿ ಅಲ್ಲಿನ ಸರ್ಕಾರಗಳು ಕುಲಾಂತರಿ ಪ್ರಯೋಗಕ್ಕೆ ಅವಕಾಶ ಕೊಟ್ಟಿಲ್ಲ. ಗುಜರಾತ್, ಬಿಹಾರ್, ಒರಿಸ್ಸಾ, ಪಶ್ಚಿಮ ಬಂಗಾಳ ಇತರ ರಾಜ್ಯಗಳು ಪ್ರಾಯೋಗಿಕವಾಗಿಯೂ ತಮ್ಮಲ್ಲಿ ಕುಲಾಂತರಿ ಸಾಸಿವೆಗೆ ಅನುಮತಿ ನೀಡಿಲ್ಲ. ಭಾರತದಲ್ಲಿ ಕೃಷಿ ಎಂಬುದು ಆಯಾ ರಾಜ್ಯಗಳಿಗೆ ಸಂಬಂಧಿಸಿದ ವಿಷಯ. ಕುಲಾಂತರಿಗೆ ಒಪ್ಪಿಗೆ ಕೊಡುವ ಮುನ್ನ ಇಂಥ ಸೂಕ್ಷ್ಮ ಅಂಶಗಳನ್ನೆಲ್ಲ ಪರಿಗಣಿಸಲೇಬೇಕು. ಬಿಟಿ ಬದನೆಗೆ ತಾತ್ಕಾಲಿಕ ನಿಷೇಧ ವಿಧಿಸಿದಾಗ ಇದನ್ನು ಪರಿಗಣಿಸಲಾಗಿತ್ತು ಎಂಬುದನ್ನು ನೆನಪಿಸಿಕೊಳ್ಳಬೇಕು. ಒಂದು ರಾಜ್ಯ ಕುಲಾಂತರಿ ನಿಷೇಧಿಸಿದ ಸಂದರ್ಭದಲ್ಲಿ, ಇನ್ನೊಂದು ಕಡೆಯಿಂದ ಅದರ ಬೀಜಗಳು ಬರುವುದನ್ನು ಹೇಗೆ ತಡೆಯುತ್ತದೆ? ರಾಜ್ಯಗಳ ಸ್ವಾಯತ್ತ ಅಧಿಕಾರ ಹೇಗೆ ಉಳಿದುಕೊಳ್ಳುತ್ತದೆ?

ದೇಶದ 55ಕ್ಕೂ ಹೆಚ್ಚು ರೈತ ಸಂಘಟನೆಗಳು ಕುಲಾಂತರಿ ಸಾಸಿವೆಯನ್ನು ಈಗಾಗಲೇ ವಿರೋಧಿಸಿವೆ. ಹಲವು ಕೃಷಿ ವಿಜ್ಞಾನಿಗಳು ಕುಲಾಂತರಿಗೆ ಅವಕಾಶ ನೀಡದಂತೆ ಪತ್ರ ಬರೆದಿದ್ದಾರೆ. ಇನ್ನು ನಾಗರಿಕ ಸಂಘಟನೆಗಳೂ ಕುಲಾಂತರಿ ಬೇಡ ಎಂದು ಆಗ್ರಹಿಸಿ ಸಾವಿರಾರು ಸಂಖ್ಯೆಯಲ್ಲಿ ಮನವಿ ಪತ್ರ ನೀಡಿವೆ. ಕುಲಾಂತರಿ ಸಾಸಿವೆಗೆ ಅನುಮತಿ ಕೊಡದೇ ಇರುವುದಕ್ಕೆ ಇಷ್ಟು ಅಂಶ ಸಾಕಲ್ಲವೇ?

**10. ಕುಲಾಂತರಿ ತಳಿ ಬೀಜಗಳಲ್ಲಿ ಸೇರಿಸುವ ಪುರುಷ ಬಂಜೆತನದ ಲಕ್ಷಣವು ಇಡೀ ಕೃಷಿ ವ್ಯವಸ್ಥೆಗೆ ಧಕ್ಕೆ ತರುತ್ತದೆ:** ಪುರುಷ ಬಂಜೆತನ ಉಂಟು ಮಾಡುವ ವಂಶವಾಹಿ(ಜೀನ್)ಗಳನ್ನು ಕುಲಾಂತರಿ ತಂತ್ರಜ್ಞಾನದಿಂದ ಸೇರಿಸುವುದರಿಂದ ಮುಂದೆ ಎದುರಾಗುವ ಪರಿಣಾಮಗಳು ಅಷ್ಟಕ್ಕೇ ನಿಲ್ಲುವುದಿಲ್ಲ. ಪುರುಷ ಬಂಜೆತನದ ಲಕ್ಷಣಗಳು ಕುಲಾಂತರಿ ಬೆಳೆಯ ಹೊಲದ ಪಕ್ಕವೂ ವ್ಯಾಪಿಸಿದರೆ, ಆ ಬಿಟಿಯೇತರ ಬೆಳೆಯೂ ಕಲಬೆರಕೆಗೆ ಒಳಗಾಗುವುದಿಲ್ಲವೇ? ರೈತ ಪದೇ ಪದೇ ಕುಲಾಂತರಿ ಬೆಳೆಗೆ ಮುಂದಾಗುತ್ತಾನೆ ಎಂದು ಹೇಳುವುದೂ ತಪ್ಪು. ಕುಲಾಂತರಿ ಬೆಳೆದ ಬಳಿಕ ಮುಂದಿನ ಹಂಗಾಮಿನಲ್ಲಿ ಬೇರೆ ಬೆಳೆ ಬೆಳೆದಾಗ, ಈ ಹಿಂದಿನ ಕುಲಾಂತರಿಯಲ್ಲಿದ್ದ ಪುರುಷ ಬಂಜೆತನದ ಲಕ್ಷಣ ಉಳಿದುಕೊಂಡು ಇಳುವರಿ ಮೇಲೆ ಪರಿಣಾಮ ಬೀರುವುದಿಲ್ಲವೇ? ಇದರಿಂದಾಗಿ ಹೆಚ್ಚು ಹೆಚ್ಚು ರೈತರು ಬೀಜ ಸ್ವಾವಲಂಬನೆ ಕಳೆದುಕೊಂಡು ಮಾರುಕಟ್ಟೆ ಮೇಲೆ ಅವಲಂಬಿತರಾಗುವುದಿಲ್ಲವೇ? ಇದು ಬೀಜ ಸಾರ್ವಭೌಮತ್ವಕ್ಕೂ ಬೀಜ ವೈವಿಧ್ಯಕ್ಕೂ ಧಕ್ಕೆ ತಂದೊಡ್ಡುತ್ತದೆ.

**11. ಭಾರತ ದೇಶ ಸಾಸಿವೆ ವೈವಿಧ್ಯದ ಕೇಂದ್ರ:** ಬಿಟಿ ಬದನೆ ವಿಷಯದಲ್ಲಿ ನೋಡಿದಂತೆಯೇ, ಸಾಸಿವೆಯಲ್ಲಿ ಕೂಡ ಭಾರತ ವೈವಿಧ್ಯದ ಕೇಂದ್ರವಾಗಿದೆ. ಸಾಸಿವೆಯ ತವರು ಭಾರತ ಎಂದು ಹಲವು ವಿಜ್ಞಾನಿಗಳು ಪ್ರತಿಪಾದಿಸುವುದೂ ಉಂಟು. 2004ರಲ್ಲಿ ಡಾ. ಎಂ.ಎಸ್. ಸ್ವಾಮಿನಾಥನ್ ನೇತೃತ್ವದ ಕಾರ್ಯಪಡೆಯು ಸಲ್ಲಿಸಿದ ವರದಿಯಿಂದ ಹಿಡಿದು 2013ರಲ್ಲಿ ಸುಪ್ರೀಂಕೋರ್ಟ್‌ನ ತಾಂತ್ರಿಕ ತಜ್ಞರ ಸಮಿತಿಯು ನೀಡಿದ ಶಿಫಾರಸಿನ ಅನುಸಾರ, ಇಲ್ಲಿಯ ಮೂಲ ಬೆಳೆ ಅಥವಾ ವೈವಿಧ್ಯದ ಬೆಳೆಗಳಿದ್ದಾಗ ಕುಲಾಂತರಿಗೆ ಅವಕಾಶ ನೀಡದಂತೆ ಸ್ಪಷ್ಟವಾಗಿ ಸೂಚಿಸಿವೆ. ಬಿಟಿ ಬದನೆಗೆ ನಿಷೇಧ ವಿಧಿಸಲು ಇದೇ ಮೂಲ ಕಾರಣವಾಗಿತ್ತು. ಕುಲಾಂತರಿ ಸಾಸಿವೆಯಿಂದ ವಂಶವಾಹಿ ಕಲುಷಿತಗೊಂಡು ನಮ್ಮ ಪರಂಪರಾಗತ ಸಾಸಿವೆ ಸಂಪತ್ತನ್ನು ಕಲಬೆರಕೆಯಾಗುವ ಸಾಧ್ಯತೆಯಿದೆ.

**12. ಕುಲಾಂತರಿ ಸಾಸಿವೆ ಹಿಡಿತಕ್ಕೆ ಸಿಗದು; ಕಲಬೆರಕೆ ಅನಿವಾರ್ಯ:** ಜಗತ್ತಿನಾದ್ಯಂತ ಸಿಗುವ ಹಲವು ಪ್ರಕರಣಗಳನ್ನು ಪರಿಶೀಲಿಸಿದಾಗ ಕಂಡುಬರುವ ಅಂಶವೇನೆಂದರೆ, ಕುಲಾಂತರಿ ಸಾಸಿವೆಯನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದು ಅಸಾಧ್ಯ; ಕಲಬೆರಕೆ ಅನಿವಾರ್ಯ. ನಾವು ಎಷ್ಟೇ ಮುಂಜಾಗ್ರತೆ ವಹಿಸಿದರೂ ಜೈವಿಕ ಹಾಗೂ ಭೌತಿಕ ಕಲಬೆರಕೆ ನಮ್ಮ ಹೊಲ– ಗದ್ದೆ ತೋಟದಲ್ಲಿ ಆಗಿಬಿಡುವ ಅಪಾಯವಿದೆ. ಇದರಿಂದ ಹೆಚ್ಚು ನಷ್ಟಕ್ಕೆ ಒಳಗಾಗುವವರು ಸಾವಯವ ಕೃಷಿಕರು. ಅದರಲ್ಲೂ ಸಾವಯವ ಪ್ರಮಾಣೀಕರಣ ಮಾಡಿಸಿಕೊಂಡ ರೈತರು. ಒಂದು ಅಂದಾಜಿನಂತೆ ಕುಲಾಂತರಿ ಬೆಳೆಯ ಪಕ್ಕದಲ್ಲಿರುವ ಜಮೀನಿನ ಬೆಳೆಯ ಶೇಕಡ 12ರಿಂದ 19ರಷ್ಟು ಪ್ರಮಾಣ ಕಲಬೆರಕೆ ಆಗುತ್ತದೆ. ಸುಪ್ರೀಂ ಕೋರ್ಟ್ 2007ರಲ್ಲಿ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿ, ಕುಲಾಂತರಿಯ ಪ್ರಾಯೋಗಿಕ ತಾಕುಗಳಿಂದ ಕಲಬೆರಕೆ ಆಗದಂತೆ ಕ್ರಮ ಕೈಗೊಳ್ಳಬೇಕು ಎಂದು ಆದೇಶ ನೀಡಿದೆ.

**13. ಸಾವಯವ ಕೃಷಿಯು ನೇರವಾಗಿ ಬಾಧಿತವಾಗಲಿದೆ:** ಸಾವಯವ ಪ್ರಮಾಣೀಕರಣ (ಆರ್ಗಾನಿಕ್ ಸರ್ಟಿಫಿಕೇಶನ್) ಮಾಡಿಸಿಕೊಂಡಿರುವ ಸಾವಯವ ಕೃಷಿಕರು ಕುಲಾಂತರಿಯಿಂದ ನೇರವಾಗಿ ಬಾಧಿತರಾಗಲಿದ್ದಾರೆ. ವಂಶವಾಹಿ ಕಲಬೆರಕೆಯಾದರೆ ಅವರ ಪ್ರಮಾಣೀಕರಣ ಸ್ಥಿತಿ ತನ್ನಿಂತಾನೇ ರದ್ದಾಗುತ್ತದೆ. ಮಣ್ಣಿನ ಫಲವತ್ತತೆ ಹೆಚ್ಚಳಕ್ಕಾಗಿ ಬಳಸುವ ಸಾಸಿವೆ ಹಿಂಡಿಯನ್ನು ಸಹ ಸಾವಯವ ಪ್ರಮಾಣೀಕೃತ ರೈತರು ಬಳಸುವಂತಿಲ್ಲ. ಇದು ಹಲವು ಬಿಕ್ಕಟ್ಟುಗಳಿಗೆ ದಾರಿ ಮಾಡಿಕೊಡುತ್ತದೆ.

**14. ಕುಲಾಂತರಿ ಆಹಾರ ಸೇವಿಸಲು ಸರ್ಕಾರ ಪ್ರಜೆಗಳಿಗೆ ಒತ್ತಾಯಿಸುವಂತಿಲ್ಲ:** ಪರಾಗರೇಣು ಹಾಗೂ ಭೌತಿಕ ಅಸ್ತಿತ್ವದ ಮೂಲಕ ಕಲುಷಿತಗೊಳ್ಳುವ ಹಾಗೂ ಅದಕ್ಕಿಂತಲೂ ಮುಖ್ಯವಾಗಿ ಉದ್ದೇಶಪೂರ್ವಕವಾಗಿ ಮಾರುಕಟ್ಟೆ ತಂತ್ರಗಳ ಮೂಲಕ ಕುಲಾಂತರಿ ಬೆಳೆಯು ಶೀಘ್ರವಾಗಿ ವ್ಯಾಪಿಸುತ್ತದೆ. ಇದರಿಂದ ಬಿಟಿಯೇತರ ಬೆಳೆ ಸಿಗದೇ ಹೋಗುವ ಸಾಧ್ಯತೆ ಇದೆ. ಇತರ ಸಾಸಿವೆಯನ್ನೂ ಕುಲಾಂತರಿ ಸಾಸಿವೆಯನ್ನೂ ಪ್ರತ್ಯೇಕಿಸಿ ಗುರುತಿಸುವ ವ್ಯವಸ್ಥೆ ನಮ್ಮಲ್ಲಿ ಇಲ್ಲದೇ ಇರುವುದರಿಂದ ಗ್ರಾಹಕರಿಗೆ ತಾವು ಸೇವಿಸುವ ಆಹಾರ ಮೂಲ ಯಾವುದೆಂದು ತಿಳಿಯುವ ಹಕ್ಕು ಇಲ್ಲದೇ ಹೋಗುತ್ತದೆ. ಇದು ಶುದ್ಧ ಆಹಾರದ ಹಕ್ಕು ಉಲ್ಲಂಘನೆಯಾದಂತೆ. ಕುಲಾಂತರಿ ಸಾಸಿವೆ ಸೇವಿಸಬೇಕೇ? ಅಥವಾ ಬೇಡವೇ? ಈ ಆಯ್ಕೆಗಳು ಅವರಿಗೆ ಸಿಗುವುದೇ ಇಲ್ಲ. ಕುಲಾಂತರಿ ಉತ್ಪನ್ನಗಳಿಗೆ ಗುರುತುಪಟ್ಟಿ ಅಂಟಿಸುವ (ಲೇಬಲಿಂಗ್) ವ್ಯವಸ್ಥೆಯ ಕೊರತೆಯಿಂದಾಗಿ ಕುಲಾಂತರಿ ಯಾವುದು? ಯಾವುದು ಸಾಮಾನ್ಯ ಆಹಾರ ಎಂಬ ವ್ಯತ್ಯಾಸ ಗೋಚರಿಸುವುದೇ ಇಲ್ಲ. ವಂಶವಾಹಿ ಕಲಬೆರಕೆ ಸಾಮನ್ಯವಾಗುವುದರಿಂದ, ರೈತರಿಗೂ ಆಯ್ಕೆಯ ಸ್ವಾತಂತ್ರ್ಯ ಸಿಗುವುದಿಲ್ಲ.

**15. ಕುಲಾಂತರಿ ಸಾಸಿವೆಗೆ ಬಳಸುವ ಜೀನ್(ವಂಶವಾಹಿ)ಗಳು ಅದನ್ನೊಂದು 'ಗರ್ಟ್' ಮಾಡುತ್ತವೆ (ಜೆನೆಟಿಕ್ ಯೂಸ್ ರಿಸ್ಟ್ರಿಕ್ಷನ್ ಟೆಕ್ನಾಲಜಿ):** ಪುರುಷ ಬಂಜೆತನದ ಲಕ್ಷಣ ತರಿಸಲು ಕುಲಾಂತರಿ ಸಾಸಿವೆಯಲ್ಲಿ ಜೀನ್ ಸೇರಿಸಲಾಗುತ್ತದೆ. ಭಾರತದ ಸಸ್ಯ ತಳಿ ಹಾಗೂ ರೈತರ ಹಕ್ಕುಗಳ ರಕ್ಷಣೆ ಕಾಯ್ದೆಯು 'ಗರ್ಟ್' ಮನುಷ್ಯರು, ಪ್ರಾಣಿಗಳು ಅಥವಾ ಸಸ್ಯಗಳ ಜೀವಕ್ಕೆ ಅಪಾಯ ತಂದೊಡ್ಡಬಲ್ಲದು ಎಂದು ಬಣ್ಣಿಸುತ್ತದೆ. ಈ ಕಾಯ್ದೆಯು 'ಗರ್ಟ್' ಬಳಸಿ ಅಭಿವೃದ್ಧಿಪಡಿಸಿದ ತಳಿಗಳನ್ನು ನೋಂದಣಿ ಮಾಡಿಕೊಳ್ಳುವುದಿಲ್ಲ. ಕುಲಾಂತರಿ ಸಾಸಿವೆ ಅಭಿವೃದ್ಧಿಪಡಿಸಲು ಅಗತ್ಯವಾಗಿದ್ದ ಸಂಶೋಧನೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾಮಗ್ರಿ ಹಸ್ತಾಂತರ ಒಪ್ಪಂದದಲ್ಲಿ ಏನನ್ನೂ ಹೇಳಿಲ್ಲ.

**16. ಆಯುರ್ವೇದದಲ್ಲಿ ಔಷಧಿಯಾಗಿ ಸಾಸಿವೆ ಬಳಕೆ:** ಜನಪ್ರಿಯ ವೈದ್ಯ ಪದ್ಧತಿಯಾಗಿರುವ ಆಯುರ್ವೇದದಲ್ಲಿ ಸಾಸಿವೆಯನ್ನು ಔಷಧಿಯನ್ನಾಗಿ ಬಳಸಲಾಗುತ್ತದೆ. ಹೀಗಾಗಿ ಕುಲಾಂತರಿ ಸಾಸಿವೆ ಬಂದರೆ, ಅದರಿಂದ ಆಗುವ ಪರಿಣಾಮ ಲೆಕ್ಕಕ್ಕೆ ಸಿಗುವುದಿಲ್ಲ. ಹಲವು ಬಗೆಯ ಚಿಕಿತ್ಸೆಗಳಲ್ಲಿ ಬಳಸುವ ಸಾಸಿವೆ ಎಣ್ಣೆಯನ್ನು, ಆಹಾರದಲ್ಲಿ ಕೂಡ ಯಥೇಚ್ಛವಾಗಿ ಉಪಯೋಗಿಸಲಾಗುತ್ತದೆ. ಆಹಾರ, ಔಷಧಿ ವಲಯದಲ್ಲಿ ಕುಲಾಂತರಿ ಸಾಸಿವೆ ಬಳಕೆಯಿಂದ ಆಗುವ ಪರಿಣಾಮ ಏನೆಂಬುದು ಇನ್ನೂ ಸ್ಪಷ್ಟವಾಗಿಲ್ಲ.

**17. ಜೇನು ಉದ್ಯಮದ ಮೇಲೆ ಕುಲಾಂತರಿ ಸಾಸಿವೆ ಪರಿಣಾಮ:** ಜೇನ್ನೊಣ ಹಾಗೂ ಇತರ ಮಿತ್ರಕೀಟಗಳು ಪರಾಗಸ್ಪರ್ಶದಲ್ಲಿ ಮಹತ್ವದ ಪಾತ್ರ ವಹಿಸುತ್ತವೆ. ಇವುಗಳ ಮೇಲೆ ಯಾವುದೇ ದುಷ್ಪರಿಣಾಮ ಉಂಟಾದರೆ ಅದು ಇಳುವರಿ ಮೇಲೆ ಪರಿಣಾಮ ಬೀರುತ್ತದೆ. ಅದು ಸಾಸಿವೆ ಬೆಳೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಪ್ರಸ್ತುತ ಅಭಿವೃದ್ಧಿಪಡಿಸಿರುವ ಕುಲಾಂತರಿ ಸಾಸಿವೆಯು ಜೇನ್ನೊಣಗಳ ಮೇಲೆ ಮಾರಕ ಪರಿಣಾಮ ಬೀರುವ ಸಾಮರ್ಥ್ಯ ಹೊಂದಿದೆ. ಈಗಾಗಲೇ ಇದು ಅನೇಕ ಅಧ್ಯಯನಗಳಿಂದ (ಅದೂ ಕುಲಾಂತರಿ ತಳಿ ಕಂಪನಿಗಳಿಂದ!) ಸಾಬೀತಾಗಿದೆ. ಕೃಷಿ ಉತ್ಪಾದನೆ ಹಾಗೂ ಜೇನುತುಪ್ಪದ ಉತ್ಪಾದನೆ ಮೇಲೆ ಇದು ಪರಿಣಾಮ ಉಂಟು ಮಾಡಬಲ್ಲದು. ಭಾರತದಲ್ಲಂತೂ ಜೇನು ಉತ್ಪಾದನೆಯು ದೊಡ್ಡ ಉದ್ಯಮವಾಗಿ ಬೆಳೆದಿದೆ ಹಾಗೂ ಸಾಸಿವೆಯು ಇಲ್ಲಿನ ಜೇನುಕೃಷಿಕರ ಮಹತ್ವದ ಮೂಲಾಧಾರವಾಗಿದೆ. ಸಾಸಿವೆ ಕೃಷಿಯ ಜತೆಗೆ ಜೇನು ಕೃಷಿ ಬೆರೆಸಿದರೆ ಅದು ಖಂಡಿತ ಯಶಸ್ಸು ಕೊಡಬಲ್ಲದು ಹಾಗೂ ಸಾಸಿವೆ ಉತ್ಪಾದನೆಯು ಶೇಕಡ 20ರಿಂದ 25ರಷ್ಟು ಹೆಚ್ಚಾಗುತ್ತದೆ. ಜೇನುತುಪ್ಪದ ಉತ್ಪಾದನೆಯು ಆ ರೈತನಿಗೆ ಇನ್ನೊಂದು ಆದಾಯವಾಗಿ ಲಾಭ ನೀಡುತ್ತದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಕುಲಾಂತರಿ ಸಾಸಿವೆಯಿಂದ ಜೇನ್ನೊಣಗಳ ಮೇಲೆ ದುಷ್ಪರಿಣಾಮ ಬೀರಿ, ಜೇನು ಉತ್ಪಾದನೆ ಕುಸಿಯಬಹುದು. ಕುಲಾಂತರಿ ಬೆಳೆಯ ಪರಾಗರೇಣು ಜೇನುತುಪ್ಪದಲ್ಲಿ ಬೆರೆತರೆ ಹಾಗೂ ಕಳೆನಾಶಕದ ಅವಶೇಷಗಳು ಜೇನಿನಲ್ಲಿ ಕಾಣಿಸಿಕೊಂಡರೆ ಅಂಥ ಕಲುಷಿತಗೊಂಡ ಜೇನುತುಪ್ಪವನ್ನು ಎಷ್ಟೋ ರಾಷ್ಟ್ರಗಳು ತಿರಸ್ಕರಿಸಬಹುದು.

**18. ಆರೋಗ್ಯಕರ ಅಡುಗೆಎಣ್ಣೆ ಬಳಕೆ ಅಥವಾ ಹೆಚ್ಚೆಚ್ಚು ತೈಲ ಬಳಕೆ? ಇವೆರಡರಲ್ಲಿ ಯಾವುದು ಮುಖ್ಯ?:** ಪ್ರತಿ ವ್ಯಕ್ತಿಯು ಸರಾಸರಿ ಸೇವಿಸಬೇಕಾದ ಅಡುಗೆ ತೈಲ ಪ್ರಮಾಣವನ್ನು ಮೀರಿ, ಭಾರತದಲ್ಲಿನ ಬಳಕೆ ಪ್ರಮಾಣ ಏರಿಕೆಯಾಗಿದೆ. ಆದರೆ ದೇಶದ ಬಹುದೊಡ್ಡ ಪ್ರಮಾಣದಲ್ಲಿರುವ ಬಡವರ್ಗದ ಜನರು ಸರಾಸರಿ ಪ್ರಮಾಣದ ಅಡುಗೆ ಎಣ್ಣೆ ಸೇವಿಸಲು ಆಗುತ್ತಿಲ್ಲ ಎಂಬ ಮಾಹಿಯೇನೋ ಸರಿ. ಆದರೆ ಈಗ ಕುಲಾಂತರಿ ಸಾಸಿವೆ ತರುವುದರ ಉದ್ದೇಶ ಆರೋಗ್ಯಕರ ಅಡುಗೆ ಎಣ್ಣೆ ವಿತರಿಸುವುದಂತೂ ಅಲ್ಲ. ಅನಾರೋಗ್ಯಕರ ಉತ್ಪನ್ನ ನೀಡಿ, ಜನರ ಆರೋಗ್ಯ ಹಾಳು ಮಾಡುವುದೇ ಗುರಿಯಾಗಿದೆ!

**19. ಕುಲಾಂತರಿ ಸಾಸಿವೆ ಕುರಿತ ಮಾಹಿತಿಯನ್ನು ರಹಸ್ಯವಾಗಿ ಇಡಲಾಗಿದೆ:** ಕೋಟಿಗಟ್ಟಲೇ ವೆಚ್ಚ ಮಾಡಿ ಅಭಿವೃದ್ಧಿಪಡಿಸಲಾದ ಕುಲಾಂತರಿ ಸಾಸಿವೆಯ ಸಂಶೋಧನೆ ಹಾಗೂ ಅದರ ಪರಿಣಾಮಗಳ ಮಾಹಿತಿಯನ್ನು ತೀರಾ ರಹಸ್ಯವಾಗಿ ಇಡಲಾಗಿದೆ. ಅದು ಯಾರ ಕೈಗೂ ಸಿಗುತ್ತಲೇ ಇಲ್ಲ! ನಿಯಂತ್ರಕರು ಆ ಮಾಹಿತಿಯನ್ನು ಸಾರ್ವಜನಿಕರಿಂದ ಯಾಕೆ ಮುಚ್ಚಿಡಲು ಬಯಸುತ್ತಿದ್ದಾರೆ ಹಾಗೂ ಅವರು ಯಾರನ್ನು ರಕ್ಷಿಸಲು ಮುಂದಾಗಿದ್ದಾರೆ ಎಂಬ ಪ್ರಶ್ನೆಗಳು ಮೂಡುತ್ತಿವೆ. ಸುಪ್ರೀಂ ಕೋರ್ಟ್ ಹಾಗೂ ಕೇಂದ್ರೀಯ ಮಾಹಿತಿ ಆಯೋಗವು ನೀಡಿದ ಆದೇಶಗಳ ಹೊರತಾಗಿಯೂ ಸಾರ್ವಜನಿಕರಿಗೆ ಈ ಮಾಹಿತಿಯನ್ನು ಕೊಡುತ್ತಲೇ ಇಲ್ಲ ಎಂಬುದು ಹಲವು ಸಂಶಯಗಳಿಗೆ ಕಾರಣವಾಗಿದೆ.

**20. ಕುಲಾಂತರಿ ಸಾಸಿವೆ ಪರೀಕ್ಷೆಯು ಉದ್ದೇಶಪೂರ್ವಕವಾಗಿ ತಪ್ಪುದಾರಿಗೆ ಎಳೆಯುವಂತಿದೆ; ಅದು ಅವೈಜ್ಞಾನಿಕವಾಗಿದ್ದು, ನಂಬಿಕೆಗೆ ಅರ್ಹವಾಗಿಲ್ಲ:** ಕುಲಾಂತರಿ ಸಾಸಿವೆ ಕುರಿತ ಅಪಾಯಗಳು ಹಾಗೂ ಪರಿಣಾಮಗಳನ್ನು ತಿಳಿದುಕೊಳ್ಳಲು ಹಲವಾರು ಪರೀಕ್ಷೆ ಮತ್ತು ಅಧ್ಯಯನ ನಡೆಯಬೇಕು. ಆದರೆ ಇಲ್ಲಿ ಪರೀಕ್ಷಾ ಫಲಿತಾಂಶ ಏನನ್ನೋ ಸೂಚಿಸಿದರೆ, ಅಂತಿಮ ನಿರ್ಣಯ ಇನ್ನೇನೋ ಆಗಿರುತ್ತದೆ!

ಪಾರಿಸಾರಿಕ ದೃಷ್ಟಿಯಿಂದ ಪರಿಶೀಲಿಸಿದಾಗ ಕೆಲವು ಅಂಶಗಳಂತೂ ನಂಬಲಿಕ್ಕೆ ಸಾಧ್ಯವಿಲ್ಲದಂತೆ ಇವೆ. ಅಧ್ಯಯನದಿಂದ ದೊರಕಿದ ಮಾಹಿತಿಯನ್ನು ಸರಿಯಾಗಿ ವಿಶ್ಲೇಷಣೆ ಮಾಡಿಲ್ಲ ಎಂಬುದೂ ಗೊತ್ತಾಗುತ್ತದೆ. ಸಿಕ್ಕಷ್ಟೇ ಕಡಿಮೆ ಮಾಹಿತಿಯನ್ನು ತಜ್ಞರು ಪ್ರತ್ಯೇಕವಾಗಿ ವಿಶ್ಲೇಷಿಸಿ ಫಲಿತಾಂಶ ನೀಡಿದ್ದಾರೆ. ಇದನ್ನು ಗಮನಿಸಿದರೆ ಉದ್ದೇಶಪೂರ್ವಕವಾಗಿ, ಅವೈಜ್ಞಾನಿಕ ಹಾಗೂ ನಂಬಿಕೆಗೆ ಅನರ್ಹವಾದ ಫಲಿತಾಂಶವನ್ನು ನೀಡಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ.

**21. ವೈಯಕ್ತಿಕ ಹಿತಾಸಕ್ತಿ:** ಕುಲಾಂತರಿ ತಂತ್ರಜ್ಞಾನ ಅನುಮೋದನಾ ಸಮಿತಿಯಲ್ಲಿನ ಆಂತರಿಕ ವೈಯಕ್ತಿಕ ಸಂಘರ್ಷಗಳೇ ಇನ್ನೂ ಸ್ಪಷ್ಟವಾಗಿ ನಿವಾರಣೆಯಾಗಿಲ್ಲ. ಕುಲಾಂತರಿ ತಳಿಗೆ ಒಪ್ಪಿಗೆ ಕೊಡಿ ಎಂದು ಮನವಿ ಮಾಡಿದ ವ್ಯಕ್ತಿಯೊಬ್ಬರು ಈ ನಿಯಂತ್ರಣಾ ಸಮಿತಿಯಲ್ಲಿ ಇದ್ದಾರೆ! ಮಾಹಿತಿ ಹಕ್ಕು ಕಾಯ್ದೆ ಅನ್ವಯ ಪಡೆಯಲಾದ ಮಾಹಿತಿ ಅನ್ವಯ, ಕುಲಾಂತರಿ ತಳಿ ಅಭಿವೃದ್ಧಿಪಡಿಸಿದವರು ಸ್ವತಃ ತಾವೇ ನಿಯಮಗಳನ್ನು ರೂಪಿಸಿಕೊಂಡಿದ್ದಾರೆ. ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ನಿರ್ದೇಶನಾಲಯದ ಹಿರಿಯ ಅಧಿಕಾರಿಗಳ ಉಸ್ತುವಾರಿಯಲ್ಲಿ ಈ ಪರೀಕ್ಷೆ ನಡೆದಿವೆ ಎಂದು ಅವರು ಹೇಳಿದ್ದರಾದರೂ, ಅದನ್ನು ಅಧಿಕಾರಿಗಳು ನಿರಾಕರಿಸಿದ್ದಾರೆ. ರಹಸ್ಯದಿಂದ ಕೂಡಿದ ನಿಯಂತ್ರಣಾ ವ್ಯವಸ್ಥೆಯಲ್ಲಿ – ಅದೂ ವೈಯಕ್ತಿಕ ಹಿತಾಸಕ್ತಿ ಇರುವಲ್ಲಿ– ಈ ತಪಾಸಣೆ ನಡೆಸಲಾಗಿದ್ದರೆ ಅದು ತಪ್ಪು ಹಾಗೂ ನಂಬಿಕೆಗೆ ಖಂಡಿತ ಅರ್ಹ ಅಲ್ಲವೇ ಅಲ್ಲ. ಈ ನಿಯಂತ್ರಣಾ ವ್ಯವಸ್ಥೆ ಮೇಲೆ ಸಾರ್ವಜನಿಕರು ಹೇಗೆ ನಂಬಿಕೆ ಇಡಬಹುದು? ಅಥವಾ ಸುರಕ್ಷತೆ ಕುರಿತು ನೀಡುವ ಪ್ರಮಾಣಪತ್ರಗಳನ್ನು ಹೇಗೆ ನಂಬಬಹುದು?

**22. ಸುಪ್ರೀಂ ಕೋರ್ಟ್‌ನ ತಾಂತ್ರಿಕ ತಜ್ಞರ ಸಮಿತಿಯಿಂದ 'ಬೇಡ':** ಕುಲಾಂತರಿ ಬೆಳೆಗಳ ಅಪಾಯ ಮಾಪನ ಹಾಗೂ ಅವುಗಳನ್ನು ಬಿಡುಗಡೆ ಮಾಡುವುದು ಭಾರತದಲ್ಲಿ ನ್ಯಾಯಾಂಗ ನಿಂದನೆಗೆ ಕಾರಣವಾಗುತ್ತದೆ. ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆಯ ಸಮಯದಲ್ಲಿ ತಾಂತ್ರಿಕ ತಜ್ಞರ ಸಮಿತಿಯನ್ನು ನೇಮಿಸಿದ್ದ ಸುಪ್ರೀಂ ಕೋರ್ಟ್, ಅದರ ಶಿಫಾರಸುಗಳ ಆಧಾರದ ಮೇಲೆ ಇನ್ನೂ ತನ್ನ ಅಭಿಪ್ರಾಯ ಹಾಗೂ ಆದೇಶ ಹೇಳಬೇಕಿದೆ. ಆರು ಸದಸ್ಯರ ತಜ್ಞ ಸಮಿತಿಯು 5:1 ಅನುಪಾತದಲ್ಲಿ ಕಳೆಕಾಶಕ ಸಹಿಷ್ಣು ಬೆಳೆಗಳನ್ನು ಭಾರತದಲ್ಲಿ ನಿಷೇಧಿಸುವಂತೆ ಸಲಹೆ ಮಾಡಿತ್ತು (ಈ ಸಮಿತಿಯ ಒಬ್ಬ ಸದಸ್ಯನ ಸಂಸ್ಥೆಗೆ ಕುಲಾಂತರಿ ಉದ್ಯಮ ಆರ್ಥಿಕ ನೆರವು ಕೊಡುತ್ತಿದೆ!). ಹೀಗೆ ಹೇಳಿರುವುದು ಇದೇ ಮೊದಲ ಸಮಿತಿಯೇನಲ್ಲ. ಕೃಷಿ ಸಚಿವಾಲಯವು ನೇಮಿಸಿದ್ದ ಕಾರ್ಯಪಡೆಯು ಇದೇ ಸಲಹೆ ಮಾಡಿತ್ತು. ಇದಕ್ಕೂ ಹೆಚ್ಚಾಗಿ, ಮೂಲ ತಳಿ ಕೇಂದ್ರ ಹಾಗೂ ವೈವಿಧ್ಯದ ತಾಣಗಳಲ್ಲಿ ಕುಲಾಂತರಿ ಬೆಳೆಗೆ ಅವಕಾಶ ಕೊಡಬಾರದು ಎಂದು ತಾಂತ್ರಿಕ ತಜ್ಞರ ಸಮಿತಿ ಶಿಫಾರಸು ಮಾಡಿತ್ತು.

**23. ಹೊಣೆಗಾರಿಕೆ ಇಲ್ಲ:** ಕುಲಾಂತರಿಗೆ ಅನುಮತಿ ಕೊಡುವಂತೆ ಮಾಡಲಾದ ಮನವಿಗಳನ್ನು ಭಾರತೀಯ ನಿಯಂತ್ರಕರ ಅನುಪಸ್ಥಿತಿಯಲ್ಲಿ ಪುರಸ್ಕರಿಸಲಾಗುತ್ತಿದೆ. ಇದು ಮುಂದೆ ಭಾರಿ ಮೊತ್ತದ ದಂಡ, ಪರಿಹಾರ ನೀಡಲು ಕಾರಣವಾಗಲಿದೆ. ಕುಲಾಂತರಿಗಳ ಅಪಾಯಕ್ಕೆ ಸಿಲುಕಿ ಸಂಕಷ್ಟ ಎದುರಿಸಬೇಕಾದವರು ನಾಗರಿಕರು. ಇದನ್ನೆಲ್ಲ ಪರಿಗಣಿಸಿ ಅನುಮತಿ ಕೊಡದೇ ಹೋದರೆ, ಸಮಸ್ಯೆಗೆ ಹೊಣೆ ಹೊರಬೇಕಾದ್ದು ಯಾರು? ನಿಯಂತ್ರಕರೇ? ಅಭಿವೃದ್ಧಿಪಡಿಸಿದ ಕಂಪೆನಿಗಳೇ? ಸರ್ಕಾರವೇ? ಸರ್ಕಾರದ ಯಾವುದೇ ಕಾನೂನು ಪಾಲಿಸಿದರೂ ನಷ್ಟ ಅನುಭವಿಸಬೇಕಾದ್ದು ಯಾರು?

**24. ಕುಲಾಂತರಿ ಸಾಸಿವೆ ಅನಗತ್ಯ:** ಇಳುವರಿ ಹೆಚ್ಚಳದ ಹೆಸರಿನಲ್ಲಿ ಅಪಾಯಕಾರಿ ಕುಲಾಂತರಿ ತಂತ್ರಜ್ಞಾನವನ್ನು ರೈತರು ಹಾಗೂ ಗ್ರಾಹಕರ ಮೇಲೆ ಒತ್ತಾಯದಿಂದ ಹೇರಲಾಗುತ್ತಿದೆ. ಅಷ್ಟಕ್ಕೂ ಈ ಕುಲಾಂತರಿ ತಳಿಯಿಂದ ಇಳುವರಿ ಹೆಚ್ಚಳವಾಗಿದ್ದಕ್ಕೆ ಖಚಿತ ಸಾಕ್ಷಿ, ಪುರಾವೆಗಳೇನೂ ಇಲ್ಲ. ಬಿಟಿಯೇತರ ಹೈಬ್ರಿಡ್ ತಳಿಗಳು ಇಳುವರಿಯನ್ನು ಕಡಿಮೆ ಕೊಡುತ್ತಿರುವುದೂ ಗಮನಕ್ಕೆ ಬಂದಿಲ್ಲ. ಇದಕ್ಕೆಲ್ಲ ಪೂರಕವಾಗಿ ಸರಳ ಕೃಷಿ ವಾತಾವರಣ ವ್ಯವಸ್ಥೆಯನ್ನು ಅಳವಡಿಸಿಕೊಂಡರೆ ಒಳ್ಳೆಯದು. ಅಂದರೆ ಬೇರು ತೀವ್ರ ಬೆಳವಣಿಗೆ ವ್ಯವಸ್ಥೆ (ಎಸ್‌ಆರ್‌ಐ) ಅಥವಾ ಬೆಳೆ ಚೈತನ್ಯ ವ್ಯವಸ್ಥೆ (ಎಸ್‌ಸಿಐ) ಅಥವಾ ಸಾಸಿವೆ ಬೆಳವಣಿಗೆ ತೀವ್ರಗೊಳಿಸುವಿಕೆ ವ್ಯವಸ್ಥೆ (ಎಸ್‌ಎಂಐ) ಅಳವಡಿಕೆಯಿಂದ ಇಳುವರಿ ಗಣನೀಯ ಪ್ರಮಾಣದಲ್ಲಿ ಹೆಚ್ಚುತ್ತದೆ. ಇವು ಈಗಿನ ಅಗತ್ಯವೇ ಹೊರತೂ ಕುಲಾಂತರಿ ಅಲ್ಲ. ತೆರಿಗೆದಾರರ ನೂರು ಕೋಟಿ ರೂಪಾಯಿಗಳನ್ನು ವೃಥಾ ಖರ್ಚು ಮಾಡಿ, ಅಪಾಯಕಾರಿ ರಾಸಾಯನಿಕ ಬಳಕೆ ಹೆಚ್ಚು ಮಾಡುವುದರ ಬದಲಿಗೆ ಸುರಕ್ಷಿತ ಹಾಗೂ ಈಗಾಗಲೇ ಜನಪ್ರಿಯವಾಗಿರುವ ತಂತ್ರಜ್ಞಾನಗಳನ್ನು ರೈತರಿಗೆ ಕೊಡುವುದು ಅಗತ್ಯವಾಗಿದೆ.

**25. ಭಾರತದ ಎಣ್ಣೆಬೀಜ ಉತ್ಪಾದನೆಯು ಕುಲಾಂತರಿ ತಳಿ ಇಲ್ಲದೇ ಹೆಚ್ಚಾಗಲು ಸಾಧ್ಯವಿದೆ:** ಎಣ್ಣೆಬೀಜ ಉತ್ಪಾದನೆಯನ್ನು ಹೆಚ್ಚಳ ಮಾಡಬೇಕೆಂದರೆ ಅದಕ್ಕೆ ರಾಜಕೀಯ ಪ್ರಬಲ ಇಚ್ಛಾಶಕ್ತಿ ಬೇಕು. ಅದನ್ನು ಬಿಟ್ಟು ಅಪಾಯಕಾರಿ ಮಾರ್ಗ ತುಳಿಯಬೇಕಿಲ್ಲ. ತಾಂತ್ರಿಕತೆಯಲ್ಲಿ ಎಸ್‌ಎಂಐ ವಿಧಾನ ಅನುಸರಿಸಬಹುದು. ಈಗಾಗಲೇ ಭತ್ತದಲ್ಲಿ ಎಸ್‌ಆರ್‌ಐ ಪದ್ಧತಿಯನ್ನು ಅಳವಡಿಸಿ ಗೆದ್ದ ರೈತರು ಲಕ್ಷಾಂತರ ಸಂಖ್ಯೆಯಲ್ಲಿ ಇದ್ದಾರೆ. ಅದನ್ನು ಸಾಸಿವೆಗೆ ಯಾಕೆ ಮಾಡಬಾರದು? ಸಮುದಾಯ ಮಟ್ಟದಲ್ಲಿ ನೀರು ನಿರ್ವಹಣಾ ವಿಧಾನಗಳನ್ನು ಪರಿಷ್ಕರಿಸಿ, ತೀವ್ರ ಸ್ವರೂಪದ ತುರ್ತು / ರಕ್ಷಣಾತ್ಮಕ ನೀರಾವರಿ ವ್ಯವಸ್ಥೆ ಅಳವಡಿಸಿಕೊಂಡು ಕಡಲೆ ಹಾಗೂ ಸೋಯಾಬೀನ್ ಹೆಚ್ಚು ಉತ್ಪಾದನೆ ಮಾಡಿದ ಸಫಲತೆಯೂ ನಮ್ಮಲ್ಲಿದೆ. ಸಮರ್ಪಕ ನೀತಿಗಳನ್ನು ಮುಂದಿಟ್ಟುಕೊಂಡು, ಆಮದು– ರಫ್ತು ನೀತಿಗಳನ್ನು ನಮ್ಮ ರೈತರ ಅನುಕೂಲಕ್ಕೆ ತಕ್ಕಂತೆ ರೂಪಿಸಿಕೊಂಡು ಎಣ್ಣೆಬೀಜ ಉತ್ಪಾದನೆ ಮಾಡಬೇಕಿದೆ. ಭಾರತದ ರೈತರು ಅತ್ಯಧಿಕ ಉತ್ಪಾದನೆ ಮಾಡಲು ಶಕ್ತರಿದ್ದಾರೆ.

# ಉಪಸಂಹಾರ

ಈ ಮೇಲಿನ ಹಲವು ಅಂಶಗಳು ಕುಲಾಂತರಿ ತಳಿಗೆ ಭಾರತದಲ್ಲಿ ಅನುಮತಿ ಕೊಡಬಾರದು ಎಂದು ಹೇಳುವ ಕಾರಣಗಳಾಗಿವೆ.

ಬಿಟಿ ಹತ್ತಿ ಹಾಗೂ ಬಿಟಿ ಬದನೆಗೆ ಸಂಬಂಧಿಸಿದಂತೆ ಭಾರತದಲ್ಲಿ ನಡೆದ ಮತ್ತು ನಡೆಯುತ್ತಿರುವ ಪ್ರಕರಣಗಳನ್ನು ಗಮನಿಸಿದರೆ, ಬಿಟಿ ಸಾಸಿವೆಗೆ ಅನುಮೋದನೆ ಖಂಡಿತ ಕೊಡಬಾರದು ಎಂಬಂತಿದೆ. ಬಿಟಿ ಹತ್ತಿಯದ್ದೇ ಒಂದು ಕರಾಳ ಕಥೆ. ನಿಯಂತ್ರಣ ಸಾಧ್ಯವಿಲ್ಲದಂತೆ ಅದರ ಕಾನೂನುಬಾಹಿರ ಕೃಷಿ ಶುರುವಾದ ಮೇಲೆ, ಅನುಮತಿ ಕೊಡಲಾಯಿತು. ಅದಾದ 15 ವರ್ಷಗಳ ಬಳಿಕ ಈಗ ತಿರುಗಿ ನೋಡಿದರೆ, ಬಿಟಿ ಹತ್ತಿಯಿಂದ ರೈತರ ನೇಣುಕುಣಿಕೆ ಇನ್ನಷ್ಟು ಬಿಗಿಯಾಗಿರುವುದು ಸ್ಪಷ್ಟವಾಗಿ ಗೋಚರವಾಗುತ್ತದೆ. ಇನ್ನು ಇಳುವರಿ ಹೆಚ್ಚಾಗುವುದಿಲ್ಲ ಎಂಬ ಹಂತಕ್ಕೆ ಬಿಟಿ ಹತ್ತಿ ಬಂದು ತಲುಪಿದೆ. ಕಾಯಿಕೊರಕಕ್ಕೆ ಪ್ರತಿರೋಧ ಶಕ್ತಿ ಹೊಂದಿದೆ ಎಂದು ಬಣ್ಣಿಸಲಾದ ಬಿಟಿ ಹತ್ತಿಯ ಬಣ್ಣ ಬಯಲಾಗಿದೆ. ಕಾಯಿಕೊರಕ ಕೀಟವು ತನ್ನ ನಿರೋಧಕ ಶಕ್ತಿಯನ್ನು ಹೆಚ್ಚಿಸಿಕೊಂಡಿದೆ. ಇದರಿಂದ ಪೀಡೆನಾಶಕ ಬಳಕೆ ಪ್ರಮಾಣವೂ ಹೆಚ್ಚಾಗಿದೆ. ಹತ್ತಿ ಉತ್ಪಾದಿಸುವ ದೇಶಗಳನ್ನು ಪರಿಗಣಿಸಿದರೆ ಉತ್ಪಾದನೆಯಲ್ಲಿ ನಮ್ಮದು 31ನೇ ದೇಶ. ಆದರೆ ಬಿಟಿ ಹತ್ತಿ ನಿಷೇಧಿಸಿರುವ 23 ದೇಶಗಳು ಉತ್ಪಾದನೆಯಲ್ಲಿ ನಮ್ಮ ಮುಂದಿನ ಸಾಲಿನಲ್ಲಿ ನಿಂತಿವೆ.

ಇನ್ನು ಬಿಟಿ ಬದನೆ ವಿಷಯಕ್ಕೆ ಬಂದರೆ, ಈ ಹಿಂದಿನ ಸರ್ಕಾರ ತಾಂತ್ರಿಕ ತಜ್ಞರ ಸಮಿತಿಯ ವರದಿಯನ್ನು ಪರಿಶೀಲಿಸಿ ನಿಷೇಧ ವಿಧಿಸಿದ್ದು ವೈಜ್ಞಾನಿಕವಾಗಿ ಸರಿಯಾಗಿದೆ ಎಂಬುದು ಸಾಬೀತಾಗಿದೆ. ಪದೇ ಪದೇ ಕುಲಾಂತರಿ ತಳಿಗಳನ್ನು ಒತ್ತಾಯದಿಂದ ಹೇರುವ ಸರ್ಕಾರಗಳ ಪ್ರಯತ್ನವನ್ನು ನಾಗರಿಕರು ವಿರೋಧಿಸುತ್ತಲೇ ಇದ್ದಾರೆ. ಚುನಾವಣೆ ಸಮಯದಲ್ಲಿ ತಮ್ಮ ಪ್ರಣಾಳಿಕೆಯಲ್ಲಿ ಬೇರೇನೋ ಆಶ್ವಾಸನೆ ನೀಡಿದ್ದ ಸರ್ಕಾರಗಳು ಈಗ ತಮ್ಮ ನಿರ್ಧಾರವನ್ನು ಬದಲಿಸುತ್ತಿರುವುದೂ ವಿಪರ್ಯಾಸ.

ಇತ್ತೀಚಿನ ವರ್ಷಗಳಲ್ಲಿ ಜಾಗತಿಕ ಮಟ್ಟದಲ್ಲಿ ಕುಲಾಂತರಿ ಕೆನೊಲಾ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗುತ್ತಿದ್ದರೆ, ಸರ್ಕಾರ ಕುಲಾಂತ–ರಿಯನ್ನು ವಾಣಿಜ್ಯ ಕೃಷಿಗೆ ತರಲು ಮುಂದಾಗಿದೆ! ಕಳೆನಾಶಕದ ಮಾರಕ ಪರಿಣಾಮಗಳು ಅರೋಗ್ಯಹಾಗೂ ಪರಿಸರದ ಮೇಲೆ ಎಷ್ಟರ ಮಟ್ಟಿಗೆ ಆಗಿವೆ ಎಂಬುದು ಎಲ್ಲರ ಗಮನಕ್ಕೂ ಬಂದಿದೆ. ಬಿಟಿ ಬದನೆಗೆ ನಿಷೇಧ ವಿಧಿಸಿದ ಮೇಲೆ, ಉಳಿದ ರಾಷ್ಟ್ರಗಳಲ್ಲಿ ಕುಲಾಂತರಿ ತಳಿಗಳು ತಂದೊಡ್ಡಿರುವ ಸಮಸ್ಯೆಗಳೂ ಗೊತ್ತಾಗುತ್ತಿವೆ. ಅಷ್ಟಕ್ಕೂ, ಸುಪ್ರೀಂ ಕೋರ್ಟ್ ಹಾಗೂ ಕೇಂದ್ರೀಯ ಮಾಹಿತಿ ಆಯೋಗದ ನಿರ್ದೇಶನ ಇದ್ದರೂ ಕುಲಾಂತರಿ ಸಾಸಿವೆ ಕುರಿತ ಸಂಶೋಧನಾ ಮಾಹಿತಿಯನ್ನು ಸಾರ್ವಜನಿಕರಿಗೆ ನೀಡುತ್ತಿಲ್ಲ ಎಂಬುದು ಸಂಶಯ ಮೂಡಿಸಿದೆ.

ಇದೆಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ನಮ್ಮ ಆರೋಗ್ಯ ಹಾಗೂ ಪರಿಸರಕ್ಕೆ ಧಕ್ಕೆಯಾಗುವ, ಅಸುರಕ್ಷಿತ, ಅನಗತ್ಯ ಹಾಗೂ ಅಪಾಯಕಾರಿ ತಂತ್ರಜ್ಞಾನವೆನಿಸಿದ ಕುಲಾಂತರಿಯನ್ನು ಅದಷ್ಟು ದೂರ ಇಡಬೇಕಾಗಿದೆ.

++++++++++++++++++++++++++++++++++++

# ಕುಲಾಂತರಿ ಸಾಸಿವೆ ಬೇಡವೇ ಬೇಡ

## ನಮ್ಮ ಆಹಾರ, ಪರಿಸರ ಹಾಗು ಕೃಷಿಯಲ್ಲಿ ಕುಲಾಂತರಿ ಬೇಡವೇ ಬೇಡ

**ಇದನ್ನು ಒಕ್ಕೊರಲಿನಿಂದ ಹೇಳಲು 044 3312 4242 ಫೋನ್ ನಂಬರ್‌ಗೆ ಮಿಸ್ಡ್ ಕಾಲ್ ಕೊಡಿ**

## ರೈತ ನಿಯಂತ್ರಿತ, ಸುರಕ್ಷಿತ, ಕಡಿಮೆ ವೆಚ್ಚದ ಹಾಗೂ ಸುಸ್ಥಿರ ತಂತ್ರಜ್ಞಾನವನ್ನು ಭಾರತದ ಕೃಷಿಯ ನಿಜವಾದ ಪರಿಹಾರ ಎಂಬಂತೆ ಉತ್ತೇಜಿಸೋಣ

* ಪರಿಸರ ಸಚಿವರಿಗೆ ಪತ್ರ ಬರೆಯಿರಿ: moefcc@nic.in

**ಕುಲಾಂತರಿಮುಕ್ತ ಭಾರತ ಮೈತ್ರಿಕೂಟದ ಪರವಾಗಿ ಪ್ರಕಟಿತ**

ಹೆಚ್ಚಿನ ವಿವರಗಳಿಗೆ www.indiagminfo.org ಭೇಟಿ ಕೊಡಿ
ಫೋನ್: 9811202794
ಫೇಸ್‌ಬುಕ್: www.facebook.com/gmwatchindia
ಟ್ವಿಟ್ಟರ್: @gmwatchindia